**ಸಾಕ್ಷಿಯನ್ನು ದಿನಾಂಕಃ02.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರಿದ ಪಾಟೀ ಸವಾಲುಃ 6, 7 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಡಿ ಕೆ ಪಿ ವಕೀಲರಿಂದಃ**

4. ನನ್ನ ತಂದೆ ಮೃತ ಪಟ್ಟ ನಂತರ ನಮ್ಮ ಕುಟುಂಬಕ್ಕೆ ಇದ್ದ ಆಸ್ತಿಗಳು ನನ್ನ ತಾಯಿಯ ಹೆಸರಿಗೆ ಖಾತೆ ಬದಲಾವಣೆ ಆಗಿದ್ದವು ಎಂದರೆ ಸರಿ. ನನ್ನ ತಾಯಿ ಮೃತ ಪಟ್ಟ ನಂತರ ನನ್ನ ಹೆಸರಿಗೆ ಮತ್ತು 8 ನೇ ಪ್ರತಿವಾದಿಯ ಹೆಸರಿಗೆ ವಿಭಾಗದ ಮೂಲಕ ಖಾತೆ ಆಗಿವೆ ಎಂದರೆ ಯಾವುದೇ ವಿಭಾಗ ಆಗಿಲ್ಲ. ಸರ್ವೆ ನಂಬರ್ 140/6 ರಲ್ಲಿ 18 ಗುಂಟೆ, ಸರ್ವೆ ನಂಬರ್ 218/2 ರಲ್ಲಿ 5 ಗುಂಟೆ, 218/3 ರಲ್ಲಿ 15 ಗುಂಟೆ, 236/4 ರಲ್ಲಿ 23 ಗುಂಟೆ ಆಸ್ತಿಗಳು ನನ್ನ ಹೆಸರಿಗೆ ಖಾತೆ ಬಂದಿದ್ದು, ನನ್ನ ತಾಯಿ ಮೃತ ಪಟ್ಟ ನಂತರ ನಾನು ಮತ್ತು 8 ನೇ ಪ್ರತಿವಾದಿ ವಿಭಾಗ ಮಾಡಿಕೊಂಡ ಪ್ರಕಾರ ನನ್ನ ಹೆಸರಿಗೆ ಬಂದಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಮೃತ ಪಟ್ಟ ನಂತರ ನನ್ನ ತಾಯಿಯ ಹೆಸರಿಗೆ ಇಂತಿಂತ ಆಸ್ತಿಗಳು ಖಾತೆ ಆಗಿವೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿದ್ದೇನೆ. ದಾವಾ ಆಸ್ತಿಗಳ ಸರ್ವೆ ನಂಬರ್ ಗಳು ಬದಲಾವಣೆ ಆಗಿರುವ ಬಗ್ಗೆ ನನಗೆ ಅಷ್ಟಾಗಿ ಮಾಹಿತಿ ಇಲ್ಲ. ನಮ್ಮ ಆಸ್ತಿಗಳು ಖಾತೆ ಆಗಿದ್ದ ಬಗ್ಗೆ ಕಾನೂನು ಸಮ್ಮತವಾಗಿ ಖಾತೆ ಆಗಿಲ್ಲ ಎಂದು ಕಂದಾಯ ಅಧಿಕಾರಿಗಳ ಮುಂದೆ ನಾನು ಪ್ರಶ್ನೆ ಮಾಡಿಲ್ಲ. ಆ ರೀತಿ ಪ್ರಶ್ನೆ ಮಾಡಲು ನನಗೆ ತೊಂದರೆ ಇತ್ತಾ ಎಂದರೆ ನನ್ನ ಅಣ್ಣ ಮತ್ತು ನಾನು 2023 ನೇ ಇಸವಿಯಲ್ಲಿ ಭಾಗ ಕೇಳಿದಾಗ ನಮಗೆ ಆ ವಿಷಯ ಗೊತ್ತಾಗಿರುತ್ತದೆ. ನಮ್ಮ ಕುಟುಂಬಕ್ಕೆ ಪಂಚಾಯಿತಿ ವ್ಯಾಪ್ತಿಯಲ್ಲಿ ಇದ್ದ ಕೆಲವೊಂದು

ಆಸ್ತಿಗಳನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಾವೆ ಸಲ್ಲಿಸುವಾಗ ತನಗೆ ಆರ್ ಟಿ ಸಿ ಸಿಕ್ಕಿರಲಿಲ್ಲ, ಈಗ ಸಿಕ್ಕಿವೆ, ಅವುಗಳನ್ನು ಕೊಡುತ್ತೇನೆ ಎಂದು ನುಡಿದಿರುತ್ತಾರೆ. ಕೊಣಸಾಲೆ ಗ್ರಾಮದ ಸರ್ವೆ ನಂಬರ್ 271/1 ರಲ್ಲಿ 10 ಗುಂಟೆ ಪೈಕಿ 6 ಗುಂಟೆ ಜಮೀನು ನನ್ನ ಹೆಸರಿಗೆ ಆರ್ ಟಿ ಸಿ ಬರುತ್ತಿದೆ ಎಂದರೆ ಕುಟುಂಬದ ಯಜಮಾನಿಕೆಯನ್ನು ನನ್ನ ಅಣ್ಣ ಮತ್ತು 8 ನೇ ಪ್ರತಿವಾದಿ ಮಾಡುತ್ತಿದ್ದರಿಂದ ನನಗೆ ಆ ಬಗ್ಗೆ ಸರಿಯಾಗಿ ಗೊತ್ತಿಲ್ಲ. ಸದರಿ ಆಸ್ತಿಯ ಖಾತೆ ನನ್ನ ಹೆಸರಿಗೆ ಹೆಸರಿನಲ್ಲಿ ಇದ್ದು, ನಾನೇ ಅದರ ಅನುಭದಲ್ಲಿ ಇದ್ದರೂ, ಉದ್ದೇಶಪೂರ್ವಕವಾಗಿ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 236/6 ರಲ್ಲಿ 15 ಗುಂಟೆ ಸ್ವತ್ತು, ಸರ್ವೆ ನಂಬರ್ 271/1 ರಲ್ಲಿ 4 ಗುಂಟೆ ಜಮೀನು ವಿಭಾಗದಲ್ಲಿ ನನ್ನ ಅಕ್ಕ ಸುಶೀಲಮ್ಮನ ಭಾಗಕ್ಕೆ ಹೋಗಿತ್ತು ಎಂದರೆ ಸರಿಯಲ್ಲ. ಸದರಿ 4 ಗುಂಟೆ ಆಸ್ತಿಯಲ್ಲಿ ಪಂಚಾಯಿತಿಯ ಆಸ್ತಿ ನಂಬರ್ 18 ರ ಅಡಿಯಲ್ಲಿ ಪೂರ್ವ ಪಶ್ಚಿಮ – 48 ಅಡಿ ಹಾಗೂ ಉತ್ತರ ದಕ್ಷಿಣ – 40 ಅಡಿಗೆ ಸಂಬಂಧಿಸಿದಂತೆ ನನ್ನ ಅಕ್ಕ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂಬರ್ 7 ರ ಆಸ್ತಿಯ ವಿಸ್ತೀರ್ಣ ತಪ್ಪಾಗಿದ್ದು, ಅದರಲ್ಲಿ 13 ಗುಂಟೆ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಂ ನಂಬರ್ 4, 6, 7 ರಲ್ಲಿ 4 ಗುಂಟೆ, ಐಟಂ ನಂಬರ್ 9 ರಲ್ಲಿ 11 ವರೆ ಗುಂಟೆ , 10 ರಲ್ಲಿ 29 ಗುಂಟೆ ರ ಆಸ್ತಿಗಳು

ನನ್ನ ಅನುಭದಲ್ಲಿ ಇದ್ದು, ನಾನೇ ಅದರಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ ಗಳ ಉಳಿಕೆ ಅರ್ಧ ಭಾಗದ ಆಸ್ತಿಯಲ್ಲಿ 8 ನೇ ಪ್ರತಿವಾದಿಗೆ ಹಕ್ಕು ಬಂದಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 10 ರ ಆಸ್ತಿಯ ಖಾತೆ ನನ್ನ ತಾಯಿಯ ಹೆಸರಿನಲ್ಲಿ ಇದ್ದ ಕಾರಣ ನಾನು 8 ನೇ ಪ್ರತಿವಾದಿಯಿಂದ ಹಣ ತೆಗೆದುಕೊಂಡು ನನ್ನ ಹಕ್ಕನ್ನು ಅವರಿಗೆ ಬಿಟ್ಟು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ರೀತಿ ಬಿಟ್ಟು ಕೊಟ್ಟಾಗ ನಾನು ಖಾತೆ ಬದಲಾವಣೆಯನ್ನು ಅವರ ಹೆಸರಿಗೆ ಮಾಡಬೇಕೆಂದು ಒಪ್ಪಿ ಸಹಿ ಮಾಡಿಕೊಟ್ಟಿದ್ದೆ ಎಂದರೆ ಸರಿಯಲ್ಲ.

5. ಬೆಸಗರಹಳ್ಳಿ ದಾಖಲೆ, ಮಾರ್ಲಮಿ ದೊಡ್ಡಿ ಗ್ರಾಮದಲ್ಲಿ ಕಿರಣ್ ಚಿತ್ರ ಮಂದಿರ ಎಂಬ ಟೆಂಟ್ ಹೌಸ್ ಇತ್ತು ಎಂದರೆ ಸರಿ. ಅದನ್ನು ವಿಭಾಗದ ಸಮಯದಲ್ಲಿ ನಾನು ಮತ್ತು 8 ನೇ ಪ್ರತಿವಾದಿ ಇಟ್ಟುಕೊಂಡು, ನನ್ನ ಅಣ್ಣ ಉಮೇಶ್ ರವರ ಭಾಗಕ್ಕೆ ಸರ್ವೆ ನಂಬರ್ 308/1 ರಲ್ಲಿ 2 ಎಕರೆ 20 ಗುಂಟೆಯನ್ನು ಬಿಟ್ಟುಕೊಟ್ಟಿದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ಅದು ಬೆಲೆ ಬಾಳದೇ ಇರುವ ಆಸ್ತಿ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ನಾನು, 8 ನೇ ಪ್ರತಿವಾದಿ ಮತ್ತು ನನ್ನ ಅಣ್ಣ ಉಮೇಶ್ 1992 ರಲ್ಲಿ ವಿಭಾಗ ಆಗಿದ್ದೆವು ಎಂದರೆ ಸರಿಯಲ್ಲ. ಉಮೇಶ್ ರವರು ಮೃತ ಪಟ್ಟ ನಂತರ ಅವರ ಆಸ್ತಿಗಳು ಕಾನೂನು ಬದ್ಧವಾಗಿ ಅವರ ಹೆಂಡತಿಯ ಹೆಸರಿಗೆ ವರ್ಗಾವಣೆಯಾಗಿವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಉಮೇಶ್ 2021 ಅಥವಾ 2022 ರಲ್ಲಿ ಮೃತ ಪಟ್ಟಿರುತ್ತಾರೆ.

ಅವರು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಮೃತ ಪಟ್ಟಿದ್ದರು. ಅವರ ಹೆಂಡತಿಯ ಹೆಸರು ಚಂದ್ರಮ್ಮ. ಈ ಕೇಸ್ ನಲ್ಲಿ ಸೇರಿಸಿರುವ ಯಾವುದೇ ಆಸ್ತಿಗಳನ್ನು ಅವರು ಸೇರಿಸಿಲ್ಲ. ದಾವಾ ಷೆಡ್ಯೂಲ್ ಐಟಂ ನಂಬರ್ 8 ರ ಆಸ್ತಿಯನ್ನು 8 ನೇ ಪ್ರತಿವಾದಿಗೆ ನನ್ನ ಅಣ್ಣ ಉಮೇಶ್ ಫಾರಂ ನಂಬರ್ 20 ರ ಮೂಲಕ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ದಿಃ03.01.2011 ರ ಕ್ರಯ ಪತ್ರದ ಮೂಲಕ 8 ನೇ ಪ್ರತಿವಾದಿಯಿಂದ ಚಂದ್ರಮ್ಮ ಮತ್ತು ಅವರ ಮಕ್ಕಳು ಖರೀದಿಸಿದ್ದರು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಖುದ್ದಾಗಿ ಗೊತ್ತಿದ್ದರೂ ಸಹ ನಿಜ ಹೇಳಿದರೆ ಭಾಗ ಸಿಗುವುದಿಲ್ಲ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಇರುವ ಆರ್ ಟಿ ಸಿ ಗಳ ಆಧಾರದ ಮೇಲೆ ನಾನು ಆಸ್ತಿಗಳಲ್ಲಿ ಪ್ರತ್ಯೇಕವಾಗಿ ವ್ಯವಹರಿಸಿಕೊಂಡು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿಂದ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಲ ತೆಗೆದುಕೊಂಡು ಪ್ರತ್ಯೇಕವಾಗಿ ವ್ಯವಹರಿಸುತ್ತಿದ್ದರೂ ಸಹ ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.